# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು - 570006

## ಕೌಶಲ್ಯಾಭಿವೃದ್ಧಿ ತರಬೇತಿ ಶಿಕ್ಷಣ

## ಪಠ್ಯಕ್ರಮ : ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳು

## ಆಡಳಿತ ಕನ್ನಡ

**ಪ್ರಸ್ತಾವನೆ** : ಕಲಿಕೆ ಒಂದು ನಿರಂತರವಾದ ಪ್ರಕ್ರಿಯೆ. ಭಾಷೆಯ ಮೂಲಕವಾಗಿ ಈ ಕಲಿಕೆಯು ಆರಂಭವಾಗುತ್ತದೆ. ಸಂವಹನಕ್ಕಾಗಿ ಒಂದು ಭಾಷೆಯನ್ನು ಬಳಸುವುದು ಮತ್ತು ನಿರ್ದಿಷ್ಟ ವ್ಯವಹಾರಕ್ಕಾಗಿ ಭಾಷೆಯನ್ನು ಬಳಸುವುದು ಪರಿಪೂರ್ಣತೆಯನ್ನು ಸಾಧಿಸಿದಷ್ಟು ವ್ಯಕ್ತಿಗಳ ಜೀವನಾವಕಾಶಗಳು ಹೆಚ್ಚಾಗುತ್ತಾ, ಸಮರ್ಪಕಗೊಳ್ಳುತ್ತಾ ಹೋಗುತ್ತದೆ. ಭಾಷೆಯ ಕೌಶಲ್ಯದ ಮೇಲೆ ಸಾಧಿಸುವ ಪರಿಣತಿ ಮತ್ತು ಭಾಷೆಯ ಮೂಲಕ ಪಡೆದುಕೊಳ್ಳುವ ಆಯಾ ಕ್ಷೇತ್ರಗಳ ಪರಿಣತಿಯು ಸ್ಪಷ್ಟತೆಯ ನ್ನು ಸಾಧಿಸಿದಷ್ಟು, ನಿರೀಕ್ಷಿತವಾದ ಫಲಿತಾಂಶವನ್ನು ಪಡೆಯುವುದು ಸಾಧ್ಯ.

ವ್ಯಕ್ತಿಗಳು ಇಂದು ಪದವಿಗಳನ್ನು ಪಡೆಯುತ್ತಿರುವುದು ಅವರ ಸಮಗ್ರ ವ್ಯಕ್ತಿತ್ವದ ವಿಕಾಸಕ್ಕಾಗಿ ಮತ್ತು ಇಚ್ಛಿಸುವ ಉದ್ಯೋಗವನ್ನು ಪಡೆಯುವು ದಕ್ಕಾಗಿ. ವ್ಯವಹಾರಿಕವಾಗಿ ಹಲವಾರು ಸಂಘ-ಸಂಸ್ಥೆಗಳ ಜೊತೆಗೆ ಸರ್ಕಾರದ ಜೊತೆಗೆ, ಸಂಘಟನೆಗಳ ಜೊತೆಗೆ ಸಂಪರ್ಕವನ್ನು ಹೊಂದುವುದು ಸಂಘ ಜೀವನದ ಮಹತ್ವದ ಉದ್ದೇಶ. ಈ ಹಿನ್ನೆಲೆ ಯಲ್ಲಿ ಆಡಳಿತ ಕನ್ನಡದ ಬಗೆಗಿನ ಪರಿಪೂರ್ಣ ಜ್ಞಾನವನ್ನು ಗಳಿಸುವುದು ವರ್ತಮಾನದ ತುರ್ತು. ಆಡಳಿತ ಕನ್ನಡಕ್ಕೆ ಸಂಬಂಧಿಸಿದ ಈ ತರಬೇತಿ ಶಿಕ್ಷಣವು ಸಾರ್ವಜನಿಕ ಜೀವನಕ್ಕೆ ವ್ಯಕ್ತಿಗಳು ಮುಕ್ತವಾಗಿ ತೆರೆದುಕೊಳ್ಳಲು ಮಾತ್ರವಲ್ಲದೆ, ನಿರೀಕ್ಷಿತ ಉದ್ದೇಶವನ್ನು ಸಾಧಿಸಲು ಸಹಕಾರಿಯಾಗಿದೆ.

## ಹಂತ – I (ಪ್ರಥಮ ವರ್ಷ)

ಆಡಳಿತ ಭಾಷೆ ಕನ್ನಡದ ಅಗತ್ಯ ಮತ್ತು ಪ್ರಯೋಜನಗಳು
ಜನಸಾಮಾನ್ಯ ಭಾಷೆ ಮತ್ತು ಆಡಳಿತ ಪ್ರಮಾಣ ಭಾಷೆ
ವಿವಿಧ ಕಾಲಘಟ್ಟದಲ್ಲಿ ಆಡಳಿತ ಭಾಷೆಯಾಗಿ ಕನ್ನಡದ ಬಳಕೆ

## ಹಂತ – II (ದ್ವಿತೀಯ ವರ್ಷ)

ಆಡಳಿತ ಭಾಷೆ ಕನ್ನಡದ ಅನುಷ್ಠಾನ
ಕರ್ನಾಟಕ ರಾಜ್ಯಾದ್ಯಂತ ಏಕರೂಪದ ಆಡಳಿತ ಭಾಷೆಯ ಅನ್ವಯ (ಗ್ರಾಮ, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಾಡಳಿತಕ್ಕೆ ಸಂಬಂಧಿಸಿದಂತೆ)
ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿ ಆಡಳಿತ ಭಾಷೆ ಕನ್ನಡದ ಅನುಷ್ಠಾನ
ಇಲಾಖಾವಾರು ಪದಕೋಶಗಳ ರಚನೆ ಮತ್ತು ಬಳಕೆ.
ಆಡಳಿತ ಭಾಷೆ ಕನ್ನಡದ ಅನುಷ್ಠಾನದಲ್ಲಿ ಸರಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಪಾತ್ರ.